# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **10** |
| **ಸದಸ್ಯರ ಹೆಸರು** | **ಶ್ರೀ ಎಂ ಎ ಗೋಪಾಲ ಸ್ವಾಮಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **07.12.2020** |
| **ಉತ್ತರಿಸುವ ಸಚಿವರು** | **ಮಾನ್ಯ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.** |
| **ಪ್ರಶ್ನೆ** | **ಉತ್ತರ** |
| ಅ) ಹಾಸನ ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಎಷ್ಟು ಸಂಸ್ಥೆಗಳಿವೆ; (ವಿವರ ನೀಡುವುದು) ಈ ಸಂಸ್ಥೆಗಳಲ್ಲಿ ಸರೋಜಿನಿ ಮಹಿಷಿ ವರದಿಯಂತೆ ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ನೀಡಲಾಗುತ್ತಿದೆಯೇ; ಇಲ್ಲದಿದ್ದಲ್ಲಿ, ಸರ್ಕಾರವು ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಇಲಾಖೆಯಲ್ಲಿ ಪ್ರಸ್ತುತ 493 ಮಾಹಿತಿ ತಂತ್ರಜ್ಞಾನ ಕಂಪನಿಗಳು ಹಾಗೂ 56 ಜೈವಿಕ ತಂತ್ರಜ್ಞಾನ ಕಂಪನಿಗಳು ನೋಂದಣಿ ಮಾಡಿಕೊಂಡಿರುತ್ತವೆ. ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಮೇಲ್ಕಂಡ ನೋಂದಣಿಯಾದ ಕಂಪನಿಗಳಲ್ಲಿ ಯಾವುದೇ ಕಂಪನಿಗಳು ಇರುವುದಿಲ್ಲ. |
| ಆ) ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ; ಉದ್ದೇಶಿಸಿದ್ದಲ್ಲಿ; ಯಾವ ಯಾವ ಪ್ರದೇಶಗಳಲ್ಲಿ ಈ ಕೇಂದ್ರಗಳನ್ನು ತೆರೆಯಲಾಗುವುದು; (ವಿವರ ನೀಡುವುದು) | ಹೌದು.<br>ಬೆಂಗಳೂರು ನಗರ ಹೊರತು ಪಡಿಸಿ ಈ ಕೆಳಕಂಡ ಪ್ರದೇಶಗಳಲ್ಲಿ ಈಗಾಗಲೇ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿರುತ್ತದೆ:<br>**<u>ಮಾಹಿತಿ ತಂತ್ರಜ್ಞಾನ ವಲಯ</u>**:<br>• ರಾಜ್ಯದ 18 ಜಿಲ್ಲೆಗಳಲ್ಲಿರುವ ಕಾಲೇಜು/ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ನಾವೀನ್ಯತೆ ಹಾಗೂ ಆವಿಷ್ಕಾರಗಳನ್ನು ಅಭಿವೃದ್ಧಿಪಡಿಸಲು ನ್ಯೂ ಏಜ್ ಇನ್ಕ್ಯುಬೇಷನ್ ಸೆಂಟರ್ ಅನ್ನು ಸ್ಥಾಪಿಸಲಾಗಿದೆ. ಅಲ್ಲದೇ, ಇನ್ನೂ 9 ಕಾಲೇಜುಗಳಲ್ಲಿ ಸದರಿ ಸೆಂಟರ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ರಾಜ್ಯದ ಹುಬ್ಬಳ್ಳಿ, ಶಿವಮೊಗ್ಗ ಹಾಗೂ ಕಲ್ಬುರ್ಗಿ ಜಿಲ್ಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ ಅನ್ನು ಸ್ಥಾಪಿಸಲಾಗಿರುತ್ತದೆ.<br>• ಮೈಸೂರಿನ ಹೆಬ್ಬಾಳದ ಹುಟ್ಟಗಳ್ಳಿಯಲ್ಲಿ ಎಲೆಕ್ಟ್ರಾನಿಕ್ಸ್ ಉದ್ಯಮಕ್ಕೆ ಅನುಕೂಲ ವಾಗುವಂತೆ ಬ್ರೌನ್‌ಫೀಲ್ಡ್ ಇಎಸ್‌ಡಿಎಮ್ ಕ್ಲಸ್ಟರ್ ಅನ್ನು ಸ್ಥಾಪಿಸಲಾಗಿದೆ.<br>• ಮಂಗಳೂರು, ಬೆಳಗಾವಿ, ಮೈಸೂರು, ಶಿವಮೊಗ್ಗ |

| | |
|---|---|
| | ಜಿಲ್ಲೆಗಳಲ್ಲಿ ತಂತ್ರಜ್ಞಾನ ಕಂಪನಿಗಳ ಉಪಯೋಗಕ್ಕಾಗಿ ಐಕೆಪಿ ವತಿಯಿಂದ ಕೆ-ಟೆಕ್ ಇನ್ನೋವೇಷನ್ ಹಬ್ ಹಾಗೂ ಸರ್ವಬಳಕೆಯ ಸಲಕರಣೆಗಳ ಸೌಲಭ್ಯ {Common Instrumentation Facility (CIF)}, ಸೌಲಭ್ಯವನ್ನು ಸರ್ಕಾರದ ವತಿಯಿಂದ ಸ್ಥಾಪಿಸಲಾಗಿದೆ.<br>• ಹುಬ್ಬಳ್ಳಿಯಲ್ಲಿ ವಿಎಲ್ಎಸ್ಐ ಇನ್ಕ್ಯುಬೇಟರ್ ಸೆಂಟರ್ ಮತ್ತು ಇಎಸ್‌ಡಿಎಮ್ ಬ್ರೌನ್‌ಫೀಲ್ಡ್ ಕ್ಲಸ್ಟರ್ ಅನ್ನು ಸ್ಥಾಪಿಸಲಾಗಿದೆ.<br><br>**<u>ಜೈವಿಕ ತಂತ್ರಜ್ಞಾನ ವಲಯ:</u>**<br>• ಬಾಗಲಕೋಟೆಯಲ್ಲಿ ಸೆಂಟರ್ ಫಾರ್ ಬಯೋಟೆಕ್ನಾಲಜೀ ರಿಸರ್ಚ್ ಕೇಂದ್ರವನ್ನು ಹಾಗೂ ಕಾಮನ್ ಇನ್ಸ್ಟ್ರುಮೆಂಟೇಷನ್ ಫೆಸಿಲಿಟಿ ಕೇಂದ್ರವನ್ನು ಸಹ ಸ್ಥಾಪಿಸಲಾಗಿದೆ.<br>• ಧಾರವಾಡದಲ್ಲಿ ಅಗ್ರಿ ಇನ್ಕ್ಯುಬೇಷನ್ ಸೆಂಟರ್ ಅನ್ನು ಹಾಗೂ ಕಾಮನ್ ಇನ್ಸ್ಟ್ರುಮೆಂಟೇಷನ್ ಫೆಸಿಲಿಟಿ ಕೇಂದ್ರವನ್ನು ಸ್ಥಾಪಿಸಲಾಗಿದೆ.<br>• ಮೈಸೂರಿನಲ್ಲಿ ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ನ್ಯೂಟ್ರಾ ನ್ಯೂಟ್ರಿ ಫೈಟೋ ಫಾರ್ಮಸಿಟಿಕಲ್ (N2P2) ಇನ್ಕ್ಯುಬೇಷನ್ ಹಾಗೂ ಕಾಮನ್ ಇನ್ಸ್ಟ್ರುಮೆಂಟೇಷನ್ ಫೆಸಿಲಿಟಿ ಕೇಂದ್ರವನ್ನು ಸ್ಥಾಪಿಸಲಾಗಿದೆ. |
| ಇ) ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ ಇತರೆ ಭಾಗಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಲು ಖಾಸಗಿ ಕಂಪನಿಗಳಿಗೆ ಸರ್ಕಾರವು ಒದಗಿಸುತ್ತಿರುವ ಸವಲತ್ತುಗಳೇನು? (ವಿವರ ನೀಡುವುದು) | ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ, ರಾಜ್ಯದ ಇತರೆ ಭಾಗಗಳಲ್ಲಿ ಮಾಹಿತಿ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರವು ದಿನಾಂಕ: 07.09.2020ರಂದು ಪ್ರಕಟಿಸಿದ ಹೊಸ ಮಾಹಿತಿ ತಂತ್ರಜ್ಞಾನ ನೀತಿ 2020-2025ರನ್ವಯ ಈ ಕೆಳಕಂಡ ಸವಲತ್ತುಗಳನ್ನು ಒದಗಿಸುತ್ತಿದೆ:-<br>• ರಾಜ್ಯದಲ್ಲಿ ಐಟಿ ಉದ್ಯಮವನ್ನು ಅಭಿವೃದ್ಧಿ ಪಡಿಸಲು ಮತ್ತು ನಾವೀನ್ಯತೆಯನ್ನು ಸಮಗ್ರವಾಗಿ ಹೆಚ್ಚಿಸಲು ಮತ್ತು ಹೊಸ ಪ್ರದೇಶದಲ್ಲಿನ ಪರಿಸರ ವ್ಯವಸ್ಥೆಗಳನ್ನು ಬಲಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>• ಮಾಹಿತಿ ತಂತ್ರಜ್ಞಾನ ಉದ್ಯಮಕ್ಕೆ ಅಗತ್ಯವಿರುವ ಕಾರ್ಮಿಕ ಬಲವನ್ನು ಸಕ್ರಿಯಗೊಳಿಸಲು ಅಗತ್ಯವಾದ ದತ್ತಾಂಶ ಸಂರಕ್ಷಣೆ, ಸುರಕ್ಷತೆಗಳನ್ನು ಬಳಸಿಕೊಳ್ಳಲು ಮತ್ತು ಸುರಕ್ಷಿತ ಮತ್ತು ಸ್ಥಿತಿಸ್ಥಾಪಕ ಪರಿಸರ ವ್ಯವಸ್ಥೆಯನ್ನು ರಚಿಸಲು ಮತ್ತು ಉಳಿಸಿಕೊಳ್ಳಲು ರಾಜ್ಯ ಸೈಬರ್ ಭದ್ರತಾ ನೀತಿಯನ್ನು ರೂಪಿಸಲು ಹೊಸ ನೀತಿಯು ಪೂರಕವಾಗಿದೆ.<br>• ಬೆಂಗಳೂರನ್ನು ಹೊರತುಪಡಿಸಿ ರಾಜ್ಯದೆಲ್ಲೆಡೆ ಮೂಲಸೌಕರ್ಯಾಭಿವೃದ್ಧಿ, ಸ್ಥಳೀಯ ಉದ್ಯಮಕ್ಕೆ |

ಪ್ರಚೋದನೆ / ಪ್ರೋತ್ಸಾಹ ನೀಡುವುದು.

- ಮಾಹಿತಿ ತಂತ್ರಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನೇತರ ವಲಯದಲ್ಲಿ ಮಾರುಕಟ್ಟೆ ಅಭಿವೃದ್ಧಿ, ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ವಿವಿಧ ಪ್ರೋತ್ಸಾಹಕಗಳು, ರಿಯಾಯಿತಿ ಮತ್ತು ವಿನಾಯಿತಿಗಳನ್ನು ಪಾರದರ್ಶಕ ರೀತಿಯಲ್ಲಿ ಒದಗಿಸುವುದು.
- ಐಪಿ ಸೃಜನೆ ಮತ್ತು ಪೂರಕ ಪರಿಸರ ವ್ಯವಸ್ಥೆಯ ವರ್ಧನೆಗೆ ಬೆಂಬಲ ನೀಡುವ ಮೂಲಕ ಮುಂಬರುವ ಉದ್ಯಮಗಳ ಬೆಳವಣಿಗೆಯನ್ನು ಉತ್ತೇಜಿಸುವುದಕ್ಕಾಗಿ ಸದರಿ ಉದ್ಯಮಕ್ಕೆ ನಾವೀನ್ಯತೆಯನ್ನು ಪ್ರೋತ್ಸಾಹಿಸುವುದು.
- ಪ್ರಸ್ತುತ ಜಾರಿಯಲ್ಲಿರುವ ಉಪಕ್ರಮಗಳನ್ನು ಬಲಪಡಿಸುವ ಮೂಲಕ ಮತ್ತು ಉದಯೋನ್ಮುಖ ತಾಂತ್ರಿಕತೆಯನ್ನು ಉತ್ತೇಜಿಸುವ ಹಾಗೂ ಕೌಶಲ್ಯ ಹೂಡಿಕೆಗಳನ್ನು ಪರಿಚಯಿಸುವ ಮೂಲಕ ಕೌಶಲ್ಯ ವರ್ಧನೆಯನ್ನು ಹಾಗೂ ಪ್ರತಿಭೆಗಳನ್ನು ಪೋಷಿಸುವುದು.
- ಮಾಹಿತಿ ತಂತ್ರಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನೇತರ ಉದ್ಯಮಗಳ ವ್ಯವಹಾರಗಳ ಸುಗಮತೆಯ ಉನ್ನತೀಕರಣಕ್ಕಾಗಿ ಸದರಿ ಉದ್ಯಮ/ಸಂಸ್ಥೆಗಳಿಗೆ ಸೌಕರ್ಯಕಲ್ಪಿಸಿ ಪ್ರೋತ್ಸಾಹಕ ಮತ್ತು ಇತರೆ ಕಾರ್ಯನೀತಿಗಳ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿ, ಬೆಳವಣಿಯನ್ನು ಸಾಧಿಸಲು ಪೂರಕ ವ್ಯವಸ್ಥೆಯನ್ನು ಅಳವಡಿಸುವುದು.
- ವಲಯ 3ರ ಹೊರಗೆ ಸ್ಥಾಪಿಸಲಾಗಿರುವ ಐಟಿ ಹಬ್ ಗಳು/ಕ್ಲಸ್ಟರ್‌ಗಳಿಗೆ ಸ್ಥಿರ ಹೂಡಿಕೆಗಳ ಶೇಕಡಾ 20ರವರೆಗೆ ಹಾಗೂ ರೂ.3ಕೋಟಿಗಳ ಪರಿಮಿತಿಗೊಳಪಟ್ಟು ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಆರ್ಥಿಕ ಬೆಂಬಲವನ್ನು ನೀಡುವುದು.
- ವಲಯ 3ರ ಹೊರಗೆ ತಮ್ಮ ಉದ್ದಿಮೆಗಳನ್ನು ಸ್ಥಾಪಿಸಲು ಯೋಜಿಸುತ್ತಿರುವ ಅರ್ಹ ಐಟಿ/ಐಟಿಎಸ್ ಸಂಸ್ಥೆಗಳಿಗೆ ಗುತ್ತಿಗೆ/ಬಾಡಿಗೆ ವೆಚ್ಚದ ಮರುಪಾವತಿ ಮಾಡುವುದು.
- ಐಟಿ/ಐಟಿಎಸ್ ಸಂಸ್ಥೆಗಳಿಗೆ ಮುದ್ರಾಂಕ ಶುಲ್ಕ/ವಿದ್ಯುತ್‌ಚ್ಛಕ್ತಿ ದರದಲ್ಲಿ ವಿನಾಯಿತಿ/ ರಿಯಾಯಿತಿ ಒದಗಿಸುವುದು.

ಜೈವಿಕ ತಂತ್ರಜ್ಞಾನ ವಲಯಕ್ಕಾಗಿ ಸರ್ಕಾರವು ಪ್ರಕಟಿಸಿರುವ ಜೈವಿಕ ತಂತ್ರಜ್ಞಾನ ನೀತಿ 3.0ರಲ್ಲಿ ರಾಜ್ಯದಾದ್ಯಂತ ಸ್ಥಾಪಿಸುವ ಜೈವಿಕ ತಂತ್ರಜ್ಞಾನ ಕಂಪನಿಗಳಿಗೆ ಈ ಕೆಳಕಂಡ ಹಣಕಾಸಿನ

| | |
|---|---|
| | ಪ್ರೋತ್ಸಾಹಕಗಳು ಹಾಗೂ ರಿಯಾಯಿತಿಗಳನ್ನು ಒದಗಿಸುವುದು:-<br>• ಉಪಘಟಕಕ್ಕೆ ಸಬ್ಸಿಡಿ.<br>• ರೂ.1ಲಕ್ಷದವರೆಗೆ ಯೋಜನೆಯ ಕಾರ್ಯ ಯೋಜನೆ ತಯಾರಿಕೆಯ ವೆಚ್ಚದ ಮರುಪಾವತಿ.<br>• ಸಂಶೋಧನಾಭಿವೃದ್ಧಿ ಘಟಕಗಳಿಗೆ ವಿದ್ಯುತ್ ದರಗಳಲ್ಲಿ ರಿಯಾಯಿತಿ.<br>• ತಂತ್ರಜ್ಞಾನ ಉನ್ನತೀಕರಣಕ್ಕಾಗಿ ಪಡೆದುಕೊಂಡ ಗರಿಷ್ಟ ರೂ.50.00 ಲಕ್ಷಗಳವರೆಗಿನ ಸಾಲದ ಬಡ್ಡಿಯಲ್ಲಿ ಸಬ್ಸಿಡಿ.<br>• ISO/BIS/NABL/GMP/GLP ಪ್ರಮಾಣೀಕರಣಗಳನ್ನು ಪಡೆಯಲು ಆರ್ಥಿಕ ಸಹಾಯ.<br>• ಭಾರತದಲ್ಲಿ ಮತ್ತು ವಿದೇಶದಲ್ಲಿ ಪೇಟೆಂಟ್ ನೋಂದಣಿಗಾಗಿ ಆರ್ಥಿಕ ಸಹಾಯ.<br>ಅಂತರಾಷ್ಟ್ರೀಯ ಮಾರ್ಕೆಟಿಂಗ್ ಪ್ರಚುರ ಕಾರ್ಯಕೈಗೊಳ್ಳಲು ಮಾರ್ಕೆಟಿಂಗ್ ಪ್ರೋತ್ಸಾಹಕ. |

(ಐಟಿಬಿಟಿ 64 ಎಲ್‌ಸಿಎಂ 2020)

**(ಡಾ|| ಅಶ್ವಥ್ ನಾರಾಯಣ್ ಸಿ.ಎನ್)**

ಉಪಮುಖ್ಯಮಂತ್ರಿಗಳು ಹಾಗೂ ವಿದ್ಯುನ್ಮಾನ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.